ಲವ್ ಮಾಡ್ಲೇ ಬರೀ ಪುಸ್ತಕ ಲವ್ ಮಾಡ್ಕೊಂಡು ಈಗ ಡಾಕ್ಟರಾಗಿದೆ.. ನಾವು ಮೂರು ಹುಡುಗೀರು ಮಾತ್ರ ಪಿಯೂಸಿಯಲ್ಲಿ ಡುಮ್ಕಿ ಹೊಡುದ್ವಿ.. ಎಂದು ಹೇಳಿಕೊಂಡು ಜೋರಾಗಿ ನಕ್ಕಳು. ನನಗೂ ನಗು ತಡೆಯಲಾರದೆ ಬಾಯಿ ತುಂಬಾ ನಕ್ಕುಬಿಟ್ಟೆ. ಆ ಕ್ಷಣದಲ್ಲಿ ನನಗೆ ಎಲ್ಲರ ಜೀವನದಲ್ಲಿಯೂ ಲಘುವಾದದ್ದೋ ಅಥವಾ ಗಂಭೀರವಾದದ್ದೋ, ಅಲ್ಪಾವಧಿಯದ್ದೋ ಅಥವಾ ದೀರ್ಘಾವಧಿಯದ್ದೋ ಒಂದು ಪ್ರೇಮ ಪ್ರಕರಣವಿರುತ್ತದೆ ಮತ್ತು ಬಹುತೇಕ ಪ್ರೇಮ ಪ್ರಕರಣಗಳು ವಿಫಲವಾಗುತ್ತವೆ ಎನಿಸಿತು.

ಮುತ್ತಿನ ನಗರಿ ಹೈದರಾಬಾದಿನಲ್ಲಿ ನಕಲಿ ಮುತ್ತುಗಳ ಹಾವಳಿ ಹೆಚ್ಚಾಗಿದೆಯೆಂದು ಎಲ್ಲೋ ಕೇಳಿ ತಿಳಿದಿದ್ದೆ. ಆದರೆ ಅಲ್ಲಿಯೇ ನನಗೆ ಒಂದು ಅಸಲಿ ಮುತ್ತು ಸಿಕ್ಕತೆಂಬುದು ಆಮೇಲೆ ತಿಳಿಯಿತು.

ಮರುದಿನ ಬೆಳಿಗ್ಗೆ ಎಷ್ಟೇ ಬೇಗ ಸಿದ್ಧವಾಗಿ ಹೊರಟರೂ ಪೂರ್ತಿ ಹೈದರಾಬಾದನ್ನು ನೋಡುವುದು ಸಾಧ್ಯವಾಗಲಿಲ್ಲ. ಸುಬ್ಬಣ್ಣ ಎಲ್ಲರಿಗೂ ಅಂದಿನ ರಾತ್ರಿ ಬಸ್ಸಿಗೆ ಬೆಂಗಳೂರಿಗೆ ಹೋಗಲು ಟಿಕೇಟು ಬುಕ್ ಮಾಡಿಸಿ ಕೊಂಡು ಬಂದಿದ್ದ. ಅದರಿಂದಾಗಿ ಆತುರಾತುರವಾಗಿ ಎಲ್ಲವನ್ನೂ ಸುತ್ತಿಕೊಂಡು ಬಂದೆವು. ಸಂಜೆಯಾಗಿ ಹೋಗಿತ್ತು. ಕೊನೆಯದಾಗಿ ಹೈದರಾಬಾದಿನ ನೆನಪಿಗಾಗಿ ಬೆಂಗಳೂರಿನ ತಾತ ಎಲ್ಲಾ ಹೆಣ್ಣುಮಕ್ಕಳಿಗೂ ಸೀರೆ ಕೊಡಿಸುವುದಾಗಿ ತಿಳಿಸಿದರು. ಅಲ್ಲೊಂದು ಕಡೆ ದೊಡ್ಡ ಬಟ್ಟೆ ಅಂಗಡಿಯೊಂದರ ಬಳಿ ಕಾರು ಪಾರ್ಕ್ ಮಾಡಿ ಎಲ್ಲರೂ ಇಳಿದೆವು. ಮತ್ತೆ ಹಿಂದಿನ ದಿನದಂತೆಯೇ ಹೆಂಗಸರೆಲ್ಲಾ ಖರೀದಿಯಲ್ಲಿ ತೊಡಗಿದ್ದರು. ನಾನು ಎಷ್ಟು ಹೊತ್ತು ಎಂದು ಅಲ್ಲಿ ಕೂರುವುದು? ಹೊರಗೆ ಬಂದು ಕೈಕಟ್ಟಿಕೊಂಡು ನಿಂತುಕೊಂಡೆ. ಯಾಕೋ ಏನೋ ಸೀಮಾ ಬರಬಹುದೇನೋ ಎಂದು ಮನಸ್ಸು ಹೇಳತೊಡಗಿತು. ನನ್ನ ಮನಸ್ಸಿನ ಊಹೆ ನಿಜವಾಯಿತು.

ಬಂದವಳೇ ಮತ್ತೆ ಯಾವಾಗ ಸಿಕ್ಕೀರಪ್ಪಾ ಬಾವನ ತಮ್ಮಾ.. ಸಾರಿ.. ಗಿರಿಧರ ಅವ್ರೇ.. ಎಂದು ತಮಾಷೆಯಿಂದ ಕೇಳಿದಳು. ನಾನು ಸುಮ್ಮನೇ ಹೀಗೇ ಸಿಗೋದು.. ಎಂದು ನಸುನಕ್ಕೆ.

ಅಯ್ಯೋ.. ಹೀಗೆ ಅಂದ್ರೆ ಸದ್ಯಕ್ಕೆ ಯಾವ್ದೂ ಫಂಕ್ಷನ್ ಇಲ್ಲಾರೀ.. ಎಂದು ನಕ್ಕಳು.

ನಿಮ್ಮ ಮೊಬೈಲ್ ನಂಬರ್ ಕೊಡಿ.. ಎಂದಳು. ನನ್ನ ಮೊಬೈಲ್ ನಂಬರ್ ನೀಡಿದೆ. ಅವಳ ಮೊಬೈಲಿನಲ್ಲಿ ನಂಬರ್ ಸಂಗ್ರಹಿಸಿಕೊಂಡು ನನಗೊಂದು ಮಿಸ್ ಕಾಲ್ ನೀಡಿ ಮರೆತು ಬಿಡಬೇಡ್ರೀ.. ಯಾವಾಗಲಾದ್ರೂ ನಾನು ಫೋನು ಮಾಡಿದ್ರೆ ಒಂದೆರಡು ಮಾತಾಡ್ರೀ.. ಎಂದು ಬೇಡಿಕೆಯ ದನಿಯಲ್ಲಿ ತಿಳಿಸಿದಳು. ನಾನು ಶ್ಯೂರ್.. ಶ್ಯೂರ್.. ಎಂದೆ. ಅವಳಿಗೆ ಏನೋ ಸಂತಸವಾದದ್ದು ಅವಳ ಮುಖದ ಭಾವದಿಂದ ತಿಳಿಯಿತು.

(ಸಶೇಷ)


# ನಿರೀಕ್ಷಿಸಿ..ಹೊಸ ಧಾರಾವಾಹಿ

ವಿರಕ್ತರಂತೆ ಜೀವಿಸುವ ಅಪ್ಪ–ಮಗ,
ಮನೆಯ ಕೊಠಡಿಯನ್ನೇ
ಅನಾಥಾಶ್ರಮವನ್ನಾಗಿ ಮಾಡಿಕೊಂಡ
ನರಹರಿ, ಸ್ವಂತ ತಮ್ಮನನ್ನೇ ಕೊಲೆ ಮಾಡಿ
ಜೈಲು ಸೇರಿದ ಅಮರೇಶ.. ಈ ಮೂವರ
ಬದುಕಿನ ಹೊಯ್ದಾಟಗಳ ನೈಜ ಚಿತ್ರಣ..

**ಖ್ಯಾತ ಕಥೆಗಾರ**
**ಕೆ.ಟಿ.ಗಟ್ಟಿ ಅವರ**
**ಹೊಸ ಸೃಷ್ಟಿ**



## ಮೋಹಚುಂಬಿತ ಮಾಯೆ

ಪುಟ ಪುಟದಲ್ಲೂ ಕುತೂಹಲ